## ಇಲ್ಲಿಯವರೆಗೆ



ಮಲ್ಲಿಗೆಯನ್ನು ರುದ್ರನಾಗ ಯಾವಾಗಲೂ ಬೈಯಲು ಕಾರಣ ಆಕೆಗೆ ಗೊತ್ತಾಗಿಬಿಡುತ್ತದೆ. ಮಾಂತ್ರಿಕ ವಿದ್ಯೆ ಇದೆಯೋ ಇಲ್ಲವೇ ಎಂಬುದನ್ನು ತಿಳಿಯಲು ಆಕೆಯ ತಂದೆ ರುದ್ರನಾಗ ಮಾವನ ಕೈಯಲ್ಲಿ ಕೈಕರಣ ಮಾಡಿಸಿದ್ದರಿಂದಲೇ ಮಾವನ ಪತ್ನಿ, ಮಕ್ಕಳು ಸತ್ತಿರಬಹುದು. ಆ ದ್ವೇಷವನ್ನು ತನ್ನ ಮೇಲೆ ತೋರಿಸುತ್ತಿರಬಹುದು ಮಾವ ಎಂಬ ಸತ್ಯ ಅರಿವಾಗಿ ಹೋಗುತ್ತದೆ. ಮಲ್ಲಿಗೆಗೆ ಮಂತ್ರಶಕ್ತಿ ಕಲಿಸಿದ್ದು ಆಕೆಯ ತಂದೆ ತಾಯಿ ಮೇಲೆ ಪ್ರಯೋಗ ಮಾಡಲೆಂದೇ ಎಂದು ರುದ್ರನಾಗ ಹೇಳುವಾಗ ಬೆಚ್ಚಿಬೀಳುತ್ತಾಳೆ ಮಲ್ಲಿಗೆ. ತಾನು ಹೇಳಿದ ಹಾಗೆ ಕೇಳಬೇಕು ಎಂದು ತಾಕೀತುಮಾಡಿದಾಗ ಮಲ್ಲಿಗೆ ಒಪ್ಪಿಕೊಳ್ಳುತ್ತಾಳೆ. ರುದ್ರನಾಗ ಇನ್ನು ಹೊಡೆಯುವುದಿಲ್ಲ, ಮಗಳಂತೆ ನೋಡಿಕೊಳ್ಳುವುದಾಗಿ ಮಲ್ಲಿಗೆಗೆ ಭರವಸೆ ಕೊಡುತ್ತಾನೆ.

ಸುರೇಂದ್ರ–ಕಾವ್ಯ ಪ್ರೀತಿ–ಪ್ರೇಮ ಪ್ರಣಯದಲ್ಲಿ ತೊಡಗಿದ್ದು, ಮದುವೆಯನ್ನು ಕಲ್ಯಾಣಮಂಟಪದಲ್ಲಿ ಆಗಲು ನಿರ್ಧರಿಸುತ್ತಾರೆ. ಸುರೇಂದ್ರ ಬಡವನಾದರೂ ಆಕೆ ಆತನ ಹೃದಯ ಶ್ರೀಮಂತಿಕೆಯನ್ನು ಮೆಚ್ಚುತ್ತಾಳೆ. ತಾನು ಸುಂದರಿಯಲ್ಲದಿದ್ದರೂ ತನ್ನನ್ನು ಮೆಚ್ಚಿದ್ದು ಏಕೆ ಎಂದು ಪ್ರಶ್ನಿಸುತ್ತಾನೆ ಸುರೇಂದ್ರ. ಇಬ್ಬರೂ ರಿಜಿಸ್ಟರ್ಡ್ ಮದುವೆ ಆಗುವ ನಿರ್ಧಾರ ಮಾಡುತ್ತಾರೆ.

ಇತ್ತ ಮದಂತ ಮಲ್ಲಿಗೆಗೆ ಸ್ಮಶಾನದಲ್ಲಿ ಪಾತಾಳ ಭೈರವಿ ಪ್ರಯೋಗದ ಬಗ್ಗೆ, ಉಪಸಂಹಾರದ ಬಗ್ಗೆ ಹೇಳಿಕೊಡುತ್ತಾನೆ. ಮಲ್ಲಿಗೆ ನೆಲಮುಟ್ಟಿ ನಮಸ್ಕರಿಸುತ್ತಾಳೆ. ತಾನು ಊರುಬಿಟ್ಟು ಹೋಗುವುದಾಗಿ ಮದಂತ ಹೇಳಿದಾಗ ಮಲ್ಲಿಗೆಗೆ ಅಚ್ಚರಿ ಜೊತೆಗೆ ನಿರಾಸೆಯೂ ಆಗುತ್ತದೆ.

ಮನೋಹರ ಕಾರು ತೆಗೆದುಕೊಂಡು ಮುಂಬಯಿಗೆ ಬಿಸಿನೆಸ್‌ಗೆ ಹೋಗುವುದಾಗಿ ಹೆಂಡತಿ ಮಗಳಿಗೆ ಹೇಳಿ ನೇರವಾಗಿ ಸೋಲಿಗಪುರ ಕಡೆಗೆ ಹೋಗುತ್ತಾನೆ. ಇಪ್ಪತ್ತು ವರ್ಷಗಳ ನಂತರ ಅಲ್ಲಿಗೆ ಹೋಗುತ್ತಿರುವ ಮನೋಹರನಿಗೆ ತಳಮಳ ಉಂಟಾಗುತ್ತದೆ. ದಾರಿಯಲ್ಲಿ ಹೋಗುವಾಗ ಕಾರು ಕೆಡುತ್ತದೆ. ಎಂಜಿನ್‌ಗೆ ನೀರು ಹಾಕುವ ಸಲುವಾಗಿ ಕ್ಯಾನ್ ತೆಗೆದುಕೊಂಡು ಸ್ವಲ್ಪದೂರ ಹೋಗುವಾಗ ಮತ್ತೊಂದು ಕಾರು ಕಾಣಿಸುತ್ತದೆ. ಹತ್ತಿರ ಹೋಗಿ ನೋಡಿದಾಗ ಕಾರಿನೊಳಗಿನ ದೃಶ್ಯ ಮನೋಹರನನ್ನು ದಿಗ್ಭ್ರಮೆಗೊಳಿಸುತ್ತದೆ. ಸೋಲಿಗಪುರ ತಲುಪಿದಾಗ ಅಲ್ಲೊಬ್ಬ ಅರುಂಧತಿ ಚೆಹರೆಯನ್ನೇ ಹೋಲುವ ಯುವತಿ ಕಾಣಿಸುತ್ತಾಳೆ. ಆಕೆಯ ಬಳಿ ರುದ್ರನಾಗನ ಬಗ್ಗೆ ವಿಚಾರಿಸುತ್ತಾನೆ. ಆದರಂತೆ ರುದ್ರನಾಗನ ಮನೆಗೆ ಹೋದಾಗ ಇಳಿವಯಸ್ಸಿನ ರುದ್ರನಾಗ ಮನೋಹರನನ್ನು ಗುರುತಿಸಿ, 'ಸಾವನ್ನು ಬಯಸಿ ಈ ಮನೆಗೆ ಬಂದಿದ್ದೀಯಾ' ಎನ್ನುತ್ತಾನೆ.

ಇಟ್ಟಿದ್ದ ಮನೋಹರನ ಕಾಲುಚೀಲ (ಸಾಕ್ಸ್) ಪಡೆದುಕೊಂಡಳು.

'ನಿನ್ನ ಜೊತೆ ನಾನಿರುತ್ತೇನೆ' ಮಲ್ಲಿಗೆ ತಲೆಯಾಡಿಸಿದಳು. ಯಾರ ಮೇಲೆ ಪ್ರಯೋಗ ಮಾಡಬೇಕು ಅಂತ ಅವಳು ಕೇಳಲಿಲ್ಲ. ಇಲ್ಲಿಗೆ ಬರುವ ಮುನ್ನ ರಸ್ತೆಯಲ್ಲಿ ಮನೋಹರನನ್ನು ಕಂಡಿದ್ದಳು. ಫೋಟೊದಲ್ಲಿ ನೋಡಿದ್ದು ನೆನಪಾಗಿ ಇವನೇ ನನ್ನ ತಂದೆ ಇರಬಹುದು ಎಂಬ ಅನುಮಾನ ಬಂದಿತ್ತು. ರುದ್ರಮಾವನ ಸೇಡಿನ ಕತೆ ಗೊತ್ತಿತ್ತು. ತಂದೆತಾಯಿ ಮತ್ತು ಪ್ರೀತಿವಾತ್ಸಲ್ಯದ ಅರಿವೇ ಇಲ್ಲದ ಮಲ್ಲಿಗೆ ಮಾವನ ಭಯದ ಗೂಡಿನಲ್ಲಿ ಬೆಳೆದಿದ್ದಳು. ತನ್ನ ಪ್ರಯೋಗದಿಂದ ತನ್ನ ತಂದೆ ಸಾಯುತ್ತಾನೆ ಎಂಬ ದುಃಖ ಉಂಟಾಗಲಿಲ್ಲ! ಚಂಡ ಎಂಬ ಕ್ಷುದ್ರಶಕ್ತಿಯನ್ನು ಪ್ರಯೋಗಿಸಲು ಸಕಲ ಸಿದ್ಧತೆಗಳನ್ನು ಸಹ ಮಾಡಿಕೊಂಡು ಸ್ಮಶಾನಕ್ಕೆ ಹೊರಟಳು.

ರುದ್ರನಾಗ ಸಹ ಅವಳ ಜೊತೆ ಇದ್ದಾನೆ. ಸ್ಮಶಾನದ ದಕ್ಷಿಣದ ಭಾಗದಲ್ಲಿ ಮಾಂತ್ರಿಕ ಹೆಣ್ಣು ಸಿದ್ಧತೆ ಮಾಡುತ್ತಿದ್ದಾಳೆ. ರಾತ್ರಿ ಹನ್ನೆರಡು ಗಂಟೆ! ಮಾಂತ್ರಿಕ ಹೆಣ್ಣು ಮಲ್ಲಿಗೆ ಮಂತ್ರ ಹೇಳುತ್ತಿದ್ದಾಳೆ! ರಾತ್ರಿಯ ನಿಶ್ಶಬ್ದತೆಯನ್ನು ಸೀಳಿಕೊಂಡು ಕೇಳಿ ಬರುತ್ತಿದೆ. ಅವಳ ಮಂತ್ರದ ಸ್ವರ. ತ್ರಿಮಯ ಸ್ವರದ ಉಚ್ಚಾರ. ಆಲಾಪನೆಯ ಮಂತ್ರದಿಂದ ಚಂಡ ಎಂಬ ಕ್ಷುದ್ರಶಕ್ತಿಯನ್ನು ಮಂತ್ರಪೂರ್ವಕವಾಗಿ ಅವಳು ಆಹ್ವಾನಿಸುತ್ತಿದ್ದಾಳೆ. ಉರಿಯುತ್ತಿರುವ ಅಗ್ನಿಕುಂಡದ ಎದುರು ಕೆಂಪು ಬಣ್ಣದಲ್ಲಿ ಚಂಡನ ವಿಕಾರ ರೂಪದ ಆಕಾರವನ್ನು ಮಾಡಿ ಇಡಲಾಗಿದೆ. ಎರಡು ತಲೆಗಳು, ಒಂದೇ ಕಣ್ಣು, ನಾಲ್ಕು ಕೈಗಳು. ಇದರ ಸುತ್ತಲೂ ನಾಲ್ಕು ತಲೆಬುರುಡೆಗಳನ್ನು ಇರಿಸಲಾಗಿದೆ.

ಎಡಭಾಗದಲ್ಲಿ ತ್ರಿಶೂಲವನ್ನು ಭೂಮಿಯಲ್ಲಿ ಹೂಳಲಾಗಿದೆ. ಅದರ ತುದಿಯಲ್ಲಿ ನಿಂಬೆಯ ಹಣ್ಣನ್ನು ಚುಚ್ಚಲಾಗಿದೆ. ಒಂಟಿಕಾಲಿನಲ್ಲಿ ನಿಂತಿದ್ದಾಳೆ. ಕತ್ತಿನಲ್ಲಿ ತಲೆಬುರುಡೆಗಳ ಹಾರ ಇದೆ. ಮಂತ್ರ ಹೇಳುತ್ತಲೇ ಕೋಳಿ ಮತ್ತು ಕುರಿಗಳನ್ನು ಬಲಿ ನೀಡುತ್ತಿದ್ದಾಳೆ.

ತುಸು ದೂರದಲ್ಲಿ ಮಂತ್ರ ದಿಗ್ಬಂಧನ ಮಾಡಿಕೊಂಡು ರುದ್ರನಾಗ ಸಹ ಕುಳಿತಿದ್ದಾನೆ. ಮಲ್ಲಿಗೆಯ ಕಾರ್ಯವೈಖರಿಯನ್ನು ಕಂಡು ಬೆರಗಾಗಿದ್ದಾನೆ. ಎಲ್ಲಿಯೂ ಒಂದಿನಿತು ಸಹ ಲೋಪ ಉಂಟಾಗಿಲ್ಲ. ಚಂಡ ಬರಲೇಬೇಕು. ಮೋಡ ಕವಿದಿದ್ದ ಆಗಸದಲ್ಲಿ ಕಣ್ಣು ಕೋರೈಸುವಂಥ ಮಿಂಚು ಮೂಡಿತು. ಗಾಳಿ `ಬರೋ' ಎಂದು ನುಗ್ಗುತ್ತಿದೆ. ಇಡೀ ಸ್ಮಶಾನ ಕಂಪಿಸಿತು. ಸಮಾಧಿಗಳಲ್ಲಿ ಬಿರುಕು, ಅರ್ಥವಾಗುತ್ತಿದೆ ರುದ್ರನಿಗೆ, ಇದು ಚಂಡನ ಆಗಮನದ ಸೂಚನೆ. ದಕ್ಷಿಣದ ದಿಕ್ಕಿನಲ್ಲಿ ಕಂಡಿತು ಕೆಂಪು ಜ್ವಾಲೆ. ದೊಡ್ಡ ಗಂಟೆಯ ಆಕಾರದಲ್ಲಿದೆ ಮತ್ತು ತೂರಿಕೊಂಡು ಬರುತ್ತಿದೆ. ಮಲ್ಲಿಗೆ ಈಗ ಚಂಡನನ್ನು ಪ್ರಚೋದಿಸಲು ನಲವತ್ತು ಸಾಲುಗಳ ಮಂತ್ರವನ್ನು ಹೇಳಲಾರಂಭಿಸಿದಳು.

ಕೆಂಪು ಜ್ವಾಲೆ ಗಿರಗಿರನೆ ತಿರುಗುತ್ತಿದೆ. ಮಂಡಲದಲ್ಲಿ ಹೆಜ್ಜೆ ಮಣ್ಣನ್ನುಉಪಯೋಗಿಸಿ ಮಾಡಿರುವ ಪ್ರತಿರೂಪದ ಗೊಂಬೆ. ಅದರಲ್ಲಿ ಅವನ ಕಾಲುಚೀಲದ (ಸಾಕ್ಸ್) ತುಂಡುಗಳನ್ನು ಅಂಟಿಸಲಾಗಿತ್ತು. ಮಂತ್ರ ಹೇಳುತ್ತಿರುವಂತೆಯೇ ಜ್ವಾಲೆ ಗೊಂಬೆಯನ್ನು ಸೇರಿಕೊಂಡಿತು. ಗೊಂಬೆ ಅಲ್ಲಾಡುತ್ತಿದೆ. ಮಲ್ಲಿಗೆ ಅಂದುಕೊಂಡಳು. ಇನ್ನು ನನ್ನ ತಂದೆಯನ್ನು ವಿಶ್ವದ ಯಾವ ಶಕ್ತಿಯಿಂದಲೂ ಸಹ ಕಾಪಾಡಲು ಸಾಧ್ಯವಿಲ್ಲ ಎಂದು.

* * *

ಹೋಗಬೇಕು... ಈ ಊರಿನಿಂದ ಬೇಗ ಹೋಗಬೇಕು ಎಂದುಕೊಂಡ ಮನೋಹರ. ಕಾರನ್ನು ಅವನು ಊರಿನ ಗೇಟಿನ ಹತ್ತಿರ ನಿಲ್ಲಿಸಿ ಬಂದಿದ್ದ. ಆತುರಾತುರವಾಗಿ ಓಡಿ ಬಂದು ಕಾರಿನಲ್ಲಿ ಕುಳಿತು ಸ್ಟಾರ್ಟ್ ಮಾಡಿದ. ಪ್ರಾಣಭಯ ಮತ್ತು ಗಾಬರಿಯಲ್ಲಿ ಅವನು ಅದನ್ನು ಗಮನಿಸಲೇ ಇಲ್ಲ. ಪೆಟ್ರೋಲ್ ಟ್ಯಾಂಕ್ ಬಿರುಕು ಕಂಡಿತ್ತು. ಸ್ವಲ್ಪವೇ ಮಾತ್ರ ಪೆಟ್ರೋಲ್ ಉಳಿದಿತ್ತು. ಕೆಲವು ಮೈಲಿಗಳು ಬಂದ ಕೂಡಲೇ ಕಾರು ನಿಂತುಕೊಂಡಿತು. ಹತ್ತು ನಿಮಿಷಗಳ ಪರೀಕ್ಷೆಯ ನಂತರ ಪೆಟ್ರೋಲ್ ಟ್ಯಾಂಕ್ ಗಮನಕ್ಕೆ ಬಂದಿತು. ಯಾರೋ ಮಾಡಿರುವ ಕೆಲಸ ಇದು.

ಭಯ... ಗಾಬರಿ!

ಏನು ಮಾಡಬೇಕೋ ತಿಳಿಯುತ್ತಿಲ್ಲ. ಸೋಲಿಗಪುರದ ಕಗ್ಗಾಡಿನ ರಸ್ತೆ. ರಸ್ತೆಯ ಎರಡು ಬದಿಗಳಲ್ಲಿ ಮರಗಳು ಬೆಳೆದಿವೆ. ಅವನ ದೃಷ್ಟಿಗೆ ಅದು ಕಂಡಿತು. ಆಕಾಶ... ಕಪ್ಪು ಆಕಾಶ! ಮೋಡಗಳು ಹಿಂಡು ಹಿಂಡಾಗಿ ಚಲಿಸುತ್ತಿದ್ದರೆ ಆಕಾಶದಲ್ಲಿ ಆನೆಗಳು ಓಡಾಡುತ್ತಿರುವ ಹಾಗೆ ಕಂಡುಬರುತ್ತಿದೆ. ಈ ರಾತ್ರಿ ನನ್ನ ಸಾವು ನಿಶ್ಚಿತ. ಇದನ್ನು ತಪ್ಪಿಸಲು ಸಾಧ್ಯವಿಲ್ಲ. ನನ್ನ ಮಗಳೇ ನನ್ನ ಸಾವಿಗೆ ಮುಹೂರ್ತ ಇಡುತ್ತಿದ್ದಾಳೆ. ಗಾಳಿ ಜೋರಾಗಿ ಬೀಸುತ್ತಿದೆ. ಗುಡುಗುಗಳ ಶಬ್ದ ಕೇಳುತ್ತಿದೆ. ಗಾಳಿ ಬಿರುಗಾಳಿಯಾಗಿ ಮರದ ಕೊಂಬೆಗಳು ಲಟಲಟನೆ ಮುರಿದುಕೊಂಡವು. ಪ್ರಚಂಡ ಗಾಳಿಯ ರಭಸದಿಂದ ಮರವೊಂದು ಉರುಳಿಕೊಂಡು ಕಾರಿನ ಮೇಲೆ ಬಿದ್ದಿತು.